ವಿಷಯ : ಸೊರಬ ತಾಲ್ಲೂಕು ಅನವಟ್ಟಿಯಲ್ಲಿ ಶಿಕ್ಷಕರ ತರಬೇತಿಕೇಂದ್ರ

212 (1739)-ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸೊರಬ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಸೊರಬ ತಾಲ್ಲೂಕು ಅನವಟ್ಟಿಯಲ್ಲಿ ಶಿಕ್ಷಕರ ತರಬೇತಿ ಕೇಂದ್ರವು ಸುಮಾರು 30 ವರ್ಷಗಳಿಂದ ನಡೆಯುತ್ತಿದ್ದು ಈ ಕೇಂದ್ರವನ್ನು ರದ್ದುಪಡಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ?

ಶ್ರೀ ಹೆಚ್. ಜಿ. ಗೋವಿಂದೇ ಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ಅ) ಇಲ್ಲ

ಆ) ಉದ್ಭವಿಸುದಿಲ್ಲ

ಶ್ರೀ ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಸಚಿವರು ಸಮಾಧಾನಕರವಾದಂಥ ಉತ್ತರವನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮತ್ತು ಉಪಪ್ರಶ್ನೆಗಳು ಯಾವುದೂ ಕೇಳುವಂಥದ್ದು ಇಲ್ಲ.

ವಿಷಯ : ಶಾಸಕರ ಭವನದ ಆಯರ್ವೇದ ಔಷಧಾಲಯದಲ್ಲಿ ಔಷಧಗಳ ಕೊರತೆ.

ಪ್ರಶ್ನೆ ಸಂಖ್ಯೆ 213 (1730)-ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಶಾಸಕರ ಭವನದ ಆಯರ್ವೇದ ಔಷಧಾಲಯದಲ್ಲಿ ಅವಶ್ಯಕ ಔಷಧಗಳ ಕೊರತೆಯಿದೆ ಎಂಬುದು ನಿಜವೇ ?

ಆ) ಔಷಧಾಲಯಕ್ಕೆ ಬೇಕಾದ ಎಲ್ಲ ಔಷಧಗಳನ್ನು ಒದಗಿಸಲು ಸರಕಾರವು ಯಾವುದೆ ಕ್ರಮ ಕೈಗೊಳ್ಳುವುದು ?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು